**ಮೂ.ದಾ.ನಂ.:** 3/2020

**ಡಿ.ಡಬ್ಲ್ಯು.1**

( ದಿಃ 30-10-2025 ರಂದು ಆದ ಆದೇಶದ ಮೇರೆಗೆ ಇಂದು ದಿನಾಂಕ: 17-07-**2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ.ಎಸ್.ಎಸ್. ವಕೀಲರಿಂದಃ**

ನನ್ನ ತಂದೆಗೆ ನಾವು ಐದು ಜನ ಮಕ್ಕಳಿದ್ದೇವೆ. ನಾವೆಲ್ಲರೂ ಕೂಡ ಒಟ್ಟಾಗಿ ಇದ್ದೆವೆ. ಪ್ರಸ್ತುತ ನನ್ನ ವಾಸ್ತವ್ಯದ ಮನೆ ಕುಮಟಾದ ಮೂಡುಕಟ್ಟೆಯಲಿದೆ. ಸದರಿ ಮೂರಡುಕಟೆಯ ಜಮೀನು ನನ್ನ ತಂದೆಗೆ ಪಿತ್ರಾರ್ಜಿತವಾಗಿದ ಬಂದ ಜಮೀನು ಎಂದರೆ ಸಾಕ್ಷಿಯ ಸದರಿ ಜಾಗವು ನನ್ನ ತಾಯಿಯದ್ದು ಎಂದು ನುಡಿಯುತ್ತಾರೆ. ಸದರಿ ಜನಮೀನು ನನ್ನ ತಂದೆಯ ತಾಯಿಯಿಂದ ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ. ನನ್ನ ತಂದೆಯ ಮರಣಾನಂತರ ಸದರಿ ಜಮೀನಿನಲ್ಲಿ ನನ್ನ ಹಾಗೂ ಸಹೋದರ ಸಹೊದರಿಯರ ಹೆಸರು ಇದೆ. ನನ್ನ ತಂದೆಯ ಹಸೆರಿನಿಂದ ನಮಗೆ ಬಂದಂತಹ ಜಮೀನಿನಲ್ಲಿ ಈಗ ನಾವು ವಾಸ್ತವ್ಯದಲ್ಲಿದೇವೆ ಎಂದರೆ ಸರಿ. ಸದರಿ ವಾಸ್ತವ್ಯದ ಮನೆಯಲ್ಲಿ ನಾನು ಒಬ್ಬನೇ ಇದ್ದೇನೆ. ಮೂಡುಕಟ್ಟೆಯ ವಾಸ್ತವ್ಯದ ಮನೆಯ ಸರ್ವೆ ನಂ. 31 ಆಗಿರುತ್ತದೆ.

ಸದರಿ ಮೂಡುಕಟ್ಟೆಯ ಜಮೀನಿನ ಸಂಬಂಧ ನಾವು ವಾಂಟಣಿ ದಾವೆಯನ್ನು ಹಾಕಿದ್ದೇವೆ ಎಂದರೆ ಸರಿ. ಸದರಿ ವಾಂಟಣಿ ಪ್ರಕರಣವು ನಿಖಾಲೆಯಾಗಿ ಅದರ ಎಫಡಿಪಿ ಪ್ರಕರಣವು ಮಾನ್ಯ ಹೆಚ್ಚುವರಿ ಸಿಸವಿಲ್ ನ್ಯಾಯಾಧಿಶರ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಸದರಿ ದಾವೆಯನ್ನು ನಾವು ದಾಯಾದಿಗಳು ಹಾಕಿಕೊಂಡಿರುತ್ತೇವೆ.

1ಹಾಗೂ 2ನೇ ಪ್ರತಿವಾದಿಯು ದಿವಗಿಯಲ್ಲಿ ವಾಸ್ಯವ್ಯದಲ್ಲಿದ್ದಾರೆ. ಅವರು ದಿವಗಿ ಸರ್ವೆ 53/2ರಲ್ಲಿ ವಾಸ್ತವ್ಯದಲ್ಲಿದ್ದಾರೆ. ಈ ಕುರಿತಾಗಿ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಮಾಡಿರಬಹುದು. ಸಾಕ್ಷಿಗೆ ತಾವು ನ್ಯಾಯಾಲಯದಲ್ಲಿ ನಿಶಾನಿಕರಿಸಿದ ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಗಳಲ್ಲಿ ತಾವು ಮನೆ ಇರುವ ಕುರಿತಾಗಿ ಯಾವುದೇ ದಾಖಲಾತಿಯನ ್ನ

ಹಾಜರುಪಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರಿದು ಅಲ್ಲಿ ಮನೆ ಇದೆ ಎಂದು ನುಡಿಯುತ್ತಾರೆ. ನಾವು 1 ಹಾಗೂ 2ನೇ ಪ್ರತಿವಾದಿಯರ ಮನೆಯು ದಿವಗಿಯಲ್ಲಿ ಬರುತ್ತದೆ ಎಂದಬ ಕುಗಿತಾಗಿ ಅವರ ಆಧಾರಕಾರ್ಡನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ಹಾಗೂ 2ನೇ ಪ್ರತಿವಾದಿಯರು ದಿವಗಿಯಲ್ಲಿ ಎಷ್ಟು ವರ್ಷದಿಂದದ ಇದ್ದಾರೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು ಗೋವಾದಲ್ಲಿ ಇದ್ದು 2ನೇ ಪ್ರತಿವಾದಿಯು ದಿವಗಿಯಲ್ಲಿ ಇರುತ್ತಾನೆ ಎಂದು ನುಡಿಯುತ್ತಾರೆ.

4 ಹಾಗೂ 5ನೇ ಪ್ರತಿವಾದಿಯರಿಗೆ ಮದುವೆಯಾಗಿ ಅವರು ಕುಮಟಾ ಹಾಗೂ ಮಣಕಿಯಲ್ಲಿ ವಾಸ್ತವ್ಯದಲ್ಲಿದ್ದಾರೆ. ನಾನು, 1 ಹಾಗೂ 2ನೇ ಪ್ರತಿವಾದಿಯವರು ಮೂಲ ದಾವಾ 120/2011ನ್ನು ದಾಖಲಿಸುವ ಸಂದರ್ಭದಲ್ಲಿ ನಾವು ದಿವಗಿಯಲ್ಲಿ ಇದ್ದೆವು , ನಾವಾಗಲೀ ನಮ್ಮ ತಂದೆಯಾಗಲೀ ಯಾವುದೇ ಕಾಲದಲ್ಲಿ ದಿವಗಿಯಲ್ಲಿ ವಾಸ್ತವ್ಯದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಒಟ್ಟೂಗೂಡಿ ಮೂಡುಕಟ್ಟೆಯಲ್ಲಿ ವಾಸ್ತವ್ಯದಲಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರೇ ಮೊದಲಿನಿಂದಲೂ ವಾಸ್ತವ್ಯದಲ್ಲಿ ಇದ್ದರೂ ಕೂಡ ನಾವು ಇದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ